# ಪಳಗಿದ ನಿರ್ದೇಶಕರ ಘನವಾದ ಸೋಲು

ದಪ್ಪ ಚೌಕಟ್ಟಿನ ಕನ್ನಡಕ. ಚಚ್ಚೌಕ ಮುಖದಲ್ಲಿ ದಿವ್ಯವಾದ ಆತ್ಮವಿಶ್ವಾಸ. ಮೂಗಿಗೂ ತುಟಿಗಳಿಗೂ ನಡುವಿನ ಅಂತರ ತುಸು ಹೆಚ್ಚು. ಮೂಗಿನ ತುದಿಯಲ್ಲಿ ಆಗೀಗ ಕೋಪ ಕುಣಿಸಿರುವುದಕ್ಕೂ ಅವರು ಹೆಸರುವಾಸಿ. ದಿಗ್ಗಜ ನಿರ್ದೇಶಕರ ಗರಡಿಯಲ್ಲಿ ಪಳಗಲು ಸಹಾಯಕ ನಿರ್ದೇಶಕರಾಗಿ ಸಾಕಷ್ಟು ಕೆಲಸ ಮಾಡಿದ್ದ ಅವರ ಅನುಭವ ಅಗಾಧ. ಏಳೆಂಟು ಸಿನಿಮಾಗಳನ್ನು ನಿರ್ಮಿಸಿ, ಒಂದಿಷ್ಟು ಕಾಸಿನ ಮುಖ ನೋಡಿದ್ದ ಅವರು ಒಂದು ಕಾಲದಲ್ಲಿ ಸೋಲುಗಳನ್ನು ಕಂಡಿದ್ದು ಅಪರೂಪವೆನ್ನಬಹುದು. 'ಸಾಹಸ ಸಿಂಹ' ಬಿರುದಾಂಕಿತ ನಟನ ಜೊತೆಗಿನ ಕಾಂಬಿನೇಷನ್‌ನಲ್ಲಿ ಬಂದ ಇಪ್ಪತ್ತಕ್ಕೂ ಹೆಚ್ಚು ಸಿನಿಮಾಗಳಲ್ಲಿ ಯಶಸ್ಸಿನದ್ದೇ ದೊಡ್ಡ ಪಾಲು. ಜನರ ನಾಡಿಮಿಡಿತ ಅರಿತ ನಿರ್ದೇಶಕ ಎಂದೇ ಅವರು 1980 ಹಾಗೂ 1990ರ ದಶಕದಲ್ಲಿ ಹೆಸರಾಗಿದ್ದರು. ಸಹಾಯಕ ನಿರ್ದೇಶಕ, ನಿರ್ಮಾಪಕ, ನಿರ್ದೇಶಕ ಹೀಗೆ ಹಂತಹಂತವಾಗಿಯೇ ಅವರು ಸಿನಿಮಾದ ಮೆಟ್ಟಿಲುಗಳನ್ನು ಬದಲಾಯಿಸಿದ್ದು. ನಾಲ್ಕು ದಶಕಗಳ ಅನುಭವ ಎಂದರೆ ತಮಾಷೆಯೇ?

ಅವರ ನಿಜವಾದ ಹೆಸರಿನಲ್ಲಿ ಮೈಸೂರು ಜಿಲ್ಲೆಯ ಒಂದು ಊರಿದೆ. ಸಿದ್ದಲಿಂಗಯ್ಯನವರಂಥ ಘಟಾನುಘಟಿ ನಿರ್ದೇಶಕರಿಂದ ಸಿನಿಮಾ ಪಾಠ ಕಲಿತವರಲ್ಲಿ ಒಬ್ಬರೆನ್ನುವುದು ಹೆಗ್ಗಳಿಕೆ. ಆ ಕಾಲದ ಸ್ಟಾರ್ ನಟರಿಂದ ಹಿಡಿದು ಈಗಿನ ಸ್ಟಾರ್ ಹುಡುಗರವರೆಗೆ ಆಕ್ಷನ್, ಕಟ್ ಹೇಳಿದವರು.

ಪ್ರೇಮ ರಸ, ಕರುಣಾ ರಸದ ಸಿನಿಮಾಗಳಲ್ಲದೆ ಸಾಹಸ ಪ್ರಧಾನ ಚಿತ್ರಗಳನ್ನೂ ಮಾಡಿ ಗೆದ್ದಿದ್ದ ಇವರಿಗೆ ಪೌರಾಣಿಕ ಸಿನಿಮಾವೊಂದನ್ನು ನಿರ್ದೇಶಿಸುವ ಅವಕಾಶ ಹುಡುಕಿಕೊಂಡು ಬಂದಿತು. ಅದರ ನಿರ್ಮಾಪಕರು ಉದಾರಿ. ರಾಜಕುಮಾರ್ ಮಾಡಬೇಕಿದ್ದ ಸಿನಿಮಾದ ಸ್ಕ್ರಿಪ್ಟ್ ಅನ್ನು ತೆರೆಗೆ ತರುವ ಅವಕಾಶ ಸಿಕ್ಕಿತೆಂದ ಮೇಲೆ ಉಬ್ಬಿಹೋಗದಿರಲಾದೀತೆ?

ವರಮಹಾಲಕ್ಷ್ಮಿ ಹಬ್ಬದ ದಿನ ಸಿನಿಮಾ ತೆರೆಕಂಡಿತು. ಅಗಲ ಮೂಗಿನ ಆ ನಿರ್ದೇಶಕರಿಗೆ ತುಸು ಆತಂಕ. ಹೊರಗೆಲ್ಲೂ ಕಾಣಿಸಿಕೊಳ್ಳದ ಅವರು ಮನೆಯೊಳಗಿನಿಂದಲೇ ರಿಪೋರ್ಟ್‌ಗಳನ್ನು ತರಿಸಿಕೊಳ್ಳತೊಡಗಿದರು. ಸಿನಿಮಾ ತೋಪಾಗಿದೆ ಎಂಬ ವರದಿ ಬಂದಿತು.

ಬಿಡುಗಡೆಯಾಗಿ ಇನ್ನೂ ವಾರ ಕೂಡ ಕಳೆದಿರಲಿಲ್ಲ; ನಿರ್ಮಾಪಕರು ಒಂದು ಸುದ್ದಿಗೋಷ್ಠಿ ಕರೆದರು. ತಮ್ಮ ಜೀವಮಾನದ ಕನಸಿನ ಚಿತ್ರವಾದರೂ ಅದು ಮಕಾಡೆಯಾಗಿದೆ ಎಂದು ಪ್ರಕಟಿಸಿದರು. ಆ ನಿರ್ಮಾಪಕರಿಗೆ ಸೋಲನ್ನು ಕೂಡ ಹಂಚಿಕೊಳ್ಳಬೇಕು ಎನಿಸಿದ್ದು ಸೋಜಿಗ. ಅಷ್ಟು ಹೊತ್ತಿಗಾಗಲೇ ಅನುಭವಿ ನಿರ್ದೇಶಕರು ಫೋನ್‌ಗೆ ಸಿಗದಂತೆ ಆಗಿದ್ದರು. ಆ ಸೋಲಿಗೆ ಕಾರಣಗಳೇನು ಎಂದು ಈಗಲೂ ಅವರನ್ನು ಯಾರಾದರೂ ಕೆಣಕಿದರೆ ಅವರ ಮೂಗಿನ ಹೊಳ್ಳೆಗಳು ಅಗಲವಾಗುವುದುಂಟು. ಅದು ಸಹಜವೇ ಅಲ್ಲವೇ?

**● ವಿಶಾಖ ಎನ್.**

Printed and Published by B. A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68